ರಾಜ್ಯದಲ್ಲಿರುವ ಜಾನುವಾರುಗಳ ಕುರಿತು

2344 - ಶ್ರೀ ಎನ್. ರಾಜಣ್ಣ (ಭಾರತಿನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಜಾನುವಾರುಗಳ ಸಂಖ್ಯೆ?

ಆ) ತಮಿಳುನಾಡು, ಗುಜರಾತ್ ಮತ್ತು ಪಂಜಾಬ್ ರಾಜ್ಯಗಳು ಈಗಾಗಲೇ ಪ್ರತ್ಯೇಕವಾದ ಪಶುವೈದ್ಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ರಾಜ್ಯದಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಇದೆಯೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 249.68 ಲಕ್ಷಗಳು. (1990ನೇ ಜಾನುವಾರು ಗಣತಿಯ ಆಧಾರದ ಮೇಲೆ)

ಆ) ತಮಿಳುನಾಡಿನಲ್ಲಿ ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯವನ್ನು ಸ್ಥಾಪಿಸಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಹೌದು.

ಉತ್ತರ ಕನ್ನಡ ಜಿಲ್ಲೆಗೆ ನಬಾರ್ಡ್ ಯೋಜನೆಯ ಹಣ ಬಿಡುಗಡೆ

2345 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಗೆ 1997-98ನೇ ಸಾಲಿಗಾಗಿ ನಬಾರ್ಡ್ ಯೋಜನೆಯಲ್ಲಿ ಎಷ್ಟು ಹಣ ಮಂಜೂರಾಗಿದೆ?

ಆ) ಯಾವ ಯಾವ ತಾಲ್ಲೂಕಿಗೆ ಎಷ್ಟು ಹಣ ಮಂಜೂರಾಗಿದೆ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಜಿಲ್ಲೆಗೆ 1997-98ನೇ ಸಾಲಿನಲ್ಲಿ ಇದುವರೆವಿಗೂ 216.91 ಲಕ್ಷ ರೂ.ಗಳ ಮೊತ್ತದ ಅಂದಾಜುಗಳು ಒಪ್ಪಿತವಾಗಿವೆ.

ಆ) ಈ ಜಿಲ್ಲೆಯ

ಸಿದ್ದಾಪುರ ತಾಲ್ಲೂಕಿಗೆ	86.41 ಲಕ್ಷ ರೂ.
ಮುಂಡಗೋಡ್ ತಾಲ್ಲೂಕಿಗೆ	23.00 ಲಕ್ಷ ರೂ.
ಸಿರ್ಸಿ ತಾಲ್ಲೂಕಿಗೆ	107.50 ಲಕ್ಷ ರೂ.

ಗಳ ಅಂದಾಜು ಮೊತ್ತದ ಕಾಮಗಾರಿಗಳು ಒಪ್ಪಿತವಾಗಿವೆ.